# ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಬದಾಮಿ.

C.C.No.78/2021
CW-10 as PW-6

| | | |
|---|---|---|
| ಸಾಕ್ಷಿದಾರರ ಹೆಸರು | : | ಸುರೇಶ ಕಾಂಬಳೆ |
| ತಂದೆಯ ಹೆಸರು | : | ಶೇಖರಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಕೆರೂರ |

ದಿನಾಂಕಃ 07.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಚಾಸಾ-1 ರಿಂದ 9 ರವರ ಪರಿಚಯ ಇದೆ. 10.02.2017 ರಂದು ಚಾಸಾ-1 ರವರನ್ನು ಒಬ್ಬರನ್ನು ಮನೆಯಲ್ಲಿಯೆನೀ ಬಿಟ್ಟು ಮನೆಯ ಎಲ್ಲಾ ಸದಸ್ಯರು ಸವದತ್ತಿ ಯಲ್ಲಮ್ಮನ ಗುಡ್ಡಕ್ಕೆ ಹೋಗಿದ್ದರು. ದಿನಾಂಕಃ 11.02.2017 ರಂದು ರಾತ್ರಿ 8.00 ಗಂಟೆಯ ಸಮಯದಲ್ಲಿ ಆರೋಪಿತರೆಲ್ಲರೂ ಸೇರಿ ಚಾಸಾ-1 ರವರ ಮನೆಗೆ ಕಲ್ಲು ಮತ್ತು ರಾಡ್ ನ್ನು ಹಿಡಿದುಕೊಂಡು ಬಂದು ಪ್ರವೇಶ ಮಾಡಿರುತ್ತಾರೆ. ಆರೋಪಿತರೆಲ್ಲರೂ ಸೇರಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬಯ್ದು ಅವರಿಗೆ ಹಲ್ಲೆ ಮಾಡಿ, ಅವರ ಸೀರೆಯನ್ನು ಹಿಡಿದು ಎಳೆದಾಡಿ ಗುಪ್ತಾಂಗಕ್ಕೆ ಹೊದ್ದು ಕಲ್ಲು ಮತ್ತು ರಾಡ್ ನಿಂದ ಹಲ್ಲೆ ಮಾಡಿರುತ್ತಾರೆ. ನಂತರ ಆರೋಪಿತರು ನಿಮ್ಮ ಕುಟುಂಬದವರನ್ನು ಸರ್ವ ನಾಶ ಮಾಡುತ್ತೆದಿವೆ ಎಂದು ಬೆದರಿಕೆ ಹಾಕಿರುತತಾರೆ. ಆರೊಪಿತರು ಅವರಿಗೆ ದೈಹಿಕ ಹಲ್ಲೆ ಮಾಡಿದ ಕಾರಣ ಚಾಸಾ-1 ರವರು ಪ್ರಜ್ಞೆ ತಪ್ಪಿ ಬಿದ್ದಿದ್ದರು. ನಂತರ ನಾನು ಚಾಸಾ-1 ರವರಿಗೆ ನೀರನ್ನು ನೀಡಿ

CHANDRASHEKHAR E BANAKAR
Digitally signed by CHANDRASHEKHAR E BANAKAR
Date: 2026.08.07 15:35:14 +0530

ಉಪಚರಿಸಿ ಬಂದಿರುತ್ತೇನೆ. ನಂತರ ಮರುದಿನ ಅವರನ್ನು ಕೆರೂರು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿ ಕೊಟ್ಟಿರುತ್ತೇನೆ. ಚಾಸಾ-1 ರವರ ಮನೆಯವರು ವಾಪಸ್ಸು ಬಂದ ಮೇಲೆ ಅವರಿಗೆ ಮಾಹಿತಿ ನೀಡಿ, ನಂತರ ಚಾಸಾ-1 ರವರು ದೂರನ್ನು ಕೊಟ್ಟಿದ್ದು, ನಾನು ಪೊಲೀಸರಿಗೆ ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು ನಂ.1 ಮತ್ತು 2 ನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲು ಶ್ರೀ **KHB,** ವಕೀಲರಿಂದ ಆರೋಪಿತರ ಪರಃ</u>

ನಾನು ಡಿ.ಎಸ್.ಎಸ್. ಸಂಘದ ನಾಯಕನಿದ್ದೇನೆ ಎಂದರೆ ಸರಿ. ನಾನು ಸದರಿ ಕಛೇರಿಯ ಆಗು ಹೋಗುಗಳನ್ನು ನೋಡಿಕೊಳ್ಳುತ್ತೇನೆ ಎಂದರೆ ಸಾಕ್ಷಿ ಆಗಾಗ ನೋಡಿಕೊಳ್ಳುತ್ತೇನೆ ಎಂದು ನುಡಿಯುತ್ತಾರೆ. ನಾನು ತಹಶೀಲ್ದಾರ ಮತ್ತು ಇತರೆ ಅಧಿಕಾರಗಳು ಮೀಟಿಂಗ್ ಗೆ ಕರೆದಾಗ ಹೋಗುತ್ತೇನೆ ಎಂದರೆ ಸರಿ ಅಲ್ಲಾ. ನಾನು ನಮ್ಮ ಸಮಾಜದವರು ಹಿರೇತನಕ್ಕೆ ಕರೆದರೆ ಹೋಗುತ್ತೇನೆ ಎಂದರೆ ಸರಿ ಅಲ್ಲಾ. ಚಾಸಾ-1 ರವರ ಮನೆಯ ಪಕ್ಕದಲ್ಲಿ ಯಲ್ಲಪ್ಪ, ಸುಭಾನಪ್ಪರವರ ಮನೆ ಇದೆ. ಚಾಸಾ-1 ರವರ ಮನೆಯ ಮುಂಭಾಗದಲ್ಲಿ ರಸ್ತೆ ಇದೆ ಎಂದರೆ ಸರಿ. ರಸ್ತೆಯ ಮೇಲೆ ಸಾಕಷ್ಟು ಜನ ಓಡಾಡುತ್ತಾರೆ ಎಂದರೆ ಸರಿ. ಘಟನೆ ನಡೆದಿದೆ ಎನ್ನಲಾದ ಸಮಯದಲ್ಲಿ ರಸ್ತೆಯ ಮೇಲೆ ಸಾಕಷ್ಟು ಜನ ಇರುತ್ತಾರೆ ಎಂದರೆ ಸರಿ. ಗಲಾಟೆ ಶಬ್ದ ಗಲಾಟೆ ಸ್ಥಳದಿಂದ ಪೋಲೀಸ್ ಠಾಣೆ 200-300 ಪೂಟ ಅಡಿ ದೂರ ಇದೆ. ಘಟನೆ ಸುವಯದಲ್ಲಿ ಎಷ್ಟು ಜನ ಸೇರಿದ್ದರು ಎಂದು ನಾನು ನೋಡಿರುವುದಿಲ್ಲಾ. ನಾನು ಆ ಸಮಯದಲ್ಲಿ ಚಾಸಾ-1 ರವರ ಮನೆಯ ಸಮೀಪದಲ್ಲಿ ಇದ್ದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಮನೆಯ ಒಳಗಡೆ ಇರಲಿಲ್ಲಾ ಎಂದು ನುಡಿಯುತ್ತಾರೆ. ಗಲಾಟೆಯನ್ನು ನೀವು ಬಿಡಿಸಲು ಪ್ರಯತ್ನಿಸಿದ್ದೀರಾ

ಎಂದರೆ ಸಾಕ್ಷಿ ನಾನು ಪ್ರಯತ್ನಿಸಿರುವುದಿಲ್ಲಾ. ಘಟನೆ ಮನೆಯ ಒಳಗಡೆ ಆಗಿರುತ್ತದೆ. ನಾನು ಸದರಿ ಮನೆಯಿಂದ 10-12 ಅಡಿ ದೂರ ಇದ್ದೆ.

ಚಾಸಾ-1 ರವರಿಗೆ ಮೊದಲು 1 ನೇ ಆರೋಪಿ ರಾಡ್ ನಿಂದ ಹೊಡೆದಿರುತ್ತಾರೆ. ನಂತರ 2 ನೇ ಆರೋಪಿ ಕಲ್ಲಿನಿಂದ ಹೊಡೆದಿರುತ್ತಾನೆ. 1 ನೇ ಆರೋಪಿ ರಾಡ್ ನಿಂದ ಚಾಸಾ-1 ರವರಿಗೆ ಹೊಡೆದಾಗ ಅವರ ತಲೆ ಹೊಡೆದಿತ್ತು. ಸಾಕ್ಷಿ ಮುಂದುವರೆದು ಅವರ ತಲೆಗೆ ಹೊಡೆದರಾ ಎಂದು ನನಗೆ ಗೊತ್ತಿಲ್ಲಾ. ಒಟ್ಟು ರಾಡ್ ನಿಂದ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಉಳಿದವರು ಆಕೆಯನ್ನು ಎಳೆದಾಡಿ ಕಲ್ಲಿನಿಂದ ಹೊಡೆದಿರುತ್ತಾರೆ. ಚಾಸಾ-1 ರವರ ಸೀರೆ ಹರಿದಿರಬಹುದು. ಸೀರೆ ಹರಿದಿರಬಹುದು ಎಂದು ನಾನು ಹೇಳಿಕೆಯಲ್ಲಿ ಬರೆಯಿಸಿದ್ದಾನೋ ಇಲ್ಲವೋ ನನಗೆ ನೆನಪಿಲ್ಲಾ. 1 ಮತ್ತು 2 ನೇ ಆರೊಪಿತರು ರಾಡ್ ಮತ್ತು ಕಲ್ಲಿನಿಂದ ಹೊಡೆದರು ಮತ್ತು ಉಳಿದ ಆರೋಪಿತರು ಕೈಯಿಂದ ಹೊಡೆದರು ಎಂದು ನಾನು ಹೇಳಿಕೆಯಲ್ಲಿ ಬರೆಯಿಸಿದ್ದೇನೆ.

ಘಟನ ಆದ ನಂತರ ಆರೋಪಿತರು ಹೋದರು. ಅವರು ಹೋದ 01 ನಿಮಿಷದ ನಂತರ ನಾನು ಚಾಸಾ-1 ರವರ ಮನೆಗೆ ಹೋಗಿರುತ್ತೇನೆ. ಆಕೆಗೆ ಉಸಿರಾಟ ಇರಲಿಲ್ಲಾ ಎಂದು ಹೇಳಿಕೆಯಲ್ಲಿ ಬರೆಯಿಸಿದ್ದೇನೆ. ಅವರಿಗೆ ಉಸಿರಾಟ ತಪ್ಪಿತ್ತು ಎಂದು ಹೇಳಲು ನೀವು ವೈದ್ಯಕೀಯ ತರಬೇತಿ ಪಡೆದಿದ್ದೀರಾ ಎಂದರೆ ಸಾಕ್ಷಿ ಪಡೆದಿಲ್ಲಾ ಎಂದು ನುಡಿಯುತ್ತಾರೆ. ಘಟನೆ ಆದ ತಕ್ಷಣ ಚಾಸಾ-1 ರವರನ್ನು ಆಸ್ಪತ್ರೆಗೆ ಸೇರಿಸಲು ಪ್ರಯತ್ನ ಪಟ್ಟೀರಾ ಎಂದರೆ ಸಾಕ್ಷಿ ನಾನು ಚಾಸಾ-1 ರವರನ್ನು ಕರೆದಿದ್ದು ಅವರು ಅವರ ಮನೆಯವರು ಬಂದ ನಂತರ ಹೋಗುತ್ತೇನೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಘಟನೆಯ ಬಗ್ಗೆ ಠಾಣೆಯವರಿಗೆ ಮಾಹಿತಿ ನೀಡಿರುವುದಿಲ್ಲಾ.

ನಮಗೂ ಮತ್ತು ಆರೊಪಿತರಿಗೂ ಅಂಗಡಿಯ ವಿಚಾರವಾಗಿ ಗಲಾಟೆ ಆಗಿತ್ತು ಎಂದರೆ ಸಾಕ್ಷಿ 04 ವರ್ಷದ ಹಿಂದೆ ಆಗಿತ್ತು ಎಂದು ನುಡಿಯುತ್ತಾರೆ. ಆದ್ದರಿಂದ ನಮಗೆ ಮನಸ್ತಾಪ ಇದೆ ಎಂದರೆ ಸರಿ ಅಲ್ಲಾ. ಹೇಳಿಕೆಯಲ್ಲಿ ಚಾಸಾ-1 ರವರ ಗುಪ್ತಾಂಗಕ್ಕೆ ಹೊಡೆದ ವಿಚಾರವನ್ನು ಬರೆಯಿಸಿದ್ದೀರಾ ಎಂದರೆ ಸಾಕ್ಷಿ ಬರೆಯಿಸಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿತರು ಚಾಸಾ-1 ಮತ್ತು ಅವರ ಕುಟುಂಬದವರ ಮೇಲೆ ಒಂದು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಅದು ಸಿ.ಸಿ.ನಂ.513/2017 ಆಗಿದೆ ಎಂದರೆ ಸರಿ. ನಾನು ಸದರಿ ದಿನ 8.00 ಗಂಟೆಗೆ ಹೋಗುತ್ತಿದ್ದಾಗ ಗಲಾಟೆ ನೋಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲಾ. ಸದರಿ ದಿನ ನಾನು ಚಸಾ-1 ರವರಿಗೆ ಉಪಚಾರ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲಾ. ನಮಗಾು ಮತ್ತು ಆರೋಪಿತರಿಗೂ ಮನಸ್ತಾಪ ಇರುವ ಕಾರಣ ಅವರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲಾ. ನಾನು ಡಿ.ಎಸ್.ಎಸ್. ನಾಯಕ ಆದ ಕಾರಣ ಅನೇಕ ಪ್ರಕರಣದಲ್ಲಿ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ ಅಲ್ಲಾ. ಮುದ್ದೆ ಮಾಲು ತರಹದ ವಸ್ತುಗಳು ಅನೇಕ ಸಿಗುತ್ತವೆ ಎಂದರೆ ಸರಿ. ಸದರಿ ದಿನ ಆರೋಪಿತರ ತಂದ ರಾಡ್ 2 ರಿಂದ 2 1/2 ಅಡಿ ಉದ್ದ ಇತ್ತು. ನ್ಯಾಯಾಲಯದ ಮುಂದೆ ಇರುವ ರಾಡ್ ಗುಜರಿ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಇರಬಹುದು. ಚಾಸಾ-1 ರವರ ಮಾತನ್ನು ಕೇಳಿ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲದೇ ಇದ್ದರೂ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲಾ.

ನಾನು ಪೊಲೀಸರಿಗೆ 13.02.2017 ರಂದು ಹೇಳಿಕೆ ನೀಡಿದ್ದು, ಸಮಯ ನೆನಪಿಲ್ಲಾ.

CW-10 as PW-6

ಮರು ವಿಚಾರಣೆ ಇರುವುದಿಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಅದೆ.

CHANDRASHEKHAR E BANAKAR
Digitally signed by CHANDRASHEKHAR E BANAKAR
Date: 2026.08.07 15:35:20 +0530

ಹಿರಿಯ ದಿವಾಣಿ ನ್ಯಾಯಾಧೀಶರು, ಬದಾಮಿ.